ತೆಗೆದುಕೊಂಡು ರಾಜ್ಯ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಉತ್ತರವನ್ನು ಕೊಡಿಸುತ್ತೇನೆ. ಆಮೇಲೆ ತೆಗೆದುಕೊಳ್ಳೋಣ. ಈಗ ಬಿಲ್ಸ್ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ : ಬಿಲ್ಸ್ ತೆಗೆದುಕೊಳ್ಳುವುದಾದರೆ ನಾವು ಭಾಗವಹಿಸುತ್ತೇವೆ. ಇಲ್ಲವೆಂದರೆ ಈ ವಿಷಯದ ಮೇಲೆ ನಾವು ಆಮೇಲೆ ಮಾತನಾಡುತ್ತೇವೆ.

ಶ್ರೀ ಸಿ.ಸಿ. ಪಾಟೀಲ : ಮಾನ್ಯ ಅಧ್ಯಕ್ಷರೆ, ನಾವು ಆ ಭಾಗದಿಂದ ಬಂದಿರುವಂಥ ಶಾಸಕರು, ನನಗೆ ಒಂದು ನಿಮಿಷ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ನಾನು ನಿಮಗೆ ಆಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆ.

(ಆ) ವಿಷಯ : ಬಾಬು ಜಗಜೀವನ್ ರಾಮ್ ಅವರ 99ನೇ ಜನ್ಮದಿನಾಚರಣೆ ಪ್ರಯುಕ್ತ ರಜೆ ಕೊಡುವುದು ಮತ್ತು ಪ್ರತಿಮೆಯನ್ನು ಅನಾವರಣ ಮಾಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಬಾಬು ಜಗಜೀವನ್‌ರಾಮ್‌ರವರ 99ನೇ ಜನ್ಮದಿನಾಚರಣೆ ಇವತ್ತು ಇದೆ. ಜನ್ಮದಿನಾಚರಣೆಯ ಸಂದರ್ಭದಲ್ಲಿ ತಾವು ರಜೆಯನ್ನು ಕೊಡಬೇಕು ಲೆಕ್ಕದಿಂದ ನೋಡಿದರೆ. 5 ಗಂಟೆಗೆ ಇಲ್ಲಿ ಸಮಾರಂಭವನ್ನು ಇಟ್ಟುಕೊಂಡಿದ್ದೀರಿ. ಇದು ಬಹಳ ಪ್ರಾಮುಖ್ಯವಾದಂಥದ್ದು, ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಜನ್ಮದಿನಾಚರಣೆಯ ದಿವಸ ಇವತ್ತು ಸದನ ನಡೆಸತಕ್ಕಂಥದ್ದು ಸರಿಯಾದದ್ದಲ್ಲ. ರಾಜ್ಯ ಸರ್ಕಾರ ರಜೆಯನ್ನು ಘೋಷಣೆ ಮಾಡಬೇಕು ಮತ್ತು ಬಾಬು ಜಗಜೀವನ್‌ರಾಮ್‌ರವರ ಪ್ರತಿಮೆ ಅನಾವರಣ ಆಗಬೇಕು.

(ಗೊಂದಲ)

(ಈ ಹಂತದಲ್ಲಿ ಡಾ: ಆರ್. ಬಿ. ಶಿರಿಯಣ್ಣನವರು ಹಾಗೂ ಸಿ.ಸಿ. ಪಾಟೀಲ್‌ರವರು ಕಳಸಾ–ಬಂಡೂರಿ ಬಗ್ಗೆ ಮಾತನಾಡಲು ಅವಕಾಶ ಕೊಡಿ ಎಂದು ಸದನದ ಬಾವಿ ಹತ್ತಿರ ಬಂದು ವಾಪಸ್ಸು ಹೋದರು)

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ : ಬಿಎಸಿ ಕಮಿಟಿಯಲ್ಲಿ ಸದನ ನಡೆಸಿ ಎಂದು ಚರ್ಚೆಯಾದಾಗ ನೀವು ಒಪ್ಪಿಕೊಂಡು ಇಂದು ಈ ತರಹ ಮಾತನಾಡುತ್ತೀರಿ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ನೀವು ನೀವೇ ಮಾತನಾಡಿಕೊಂಡರೆ ಹೇಗೆ?

ಶ್ರೀ ಬಸವರಾಜ ಹೊರಟ್ಟಿ : ಬಿಎಸಿ ಮೀಟಿಂಗ್‌ನಲ್ಲಿ ಒಪ್ಪಿಕೊಂಡಿದ್ದಾರೆ, ನೀವೇ ಸದನ ನಡೆಸಬೇಕೆಂದು ಹೇಳಿದ್ದೀರಿ ಅದರಂತೆ ಕಾರ್ಯಕ್ರಮಗಳು ನಡೆಯಲಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಬಾಬು ಜಗಜೀವನ್‌ರಾಮ್‌ರವರ ಜನ್ಮದಿನಾಚರಣೆಗೆ ರಜೆ ಕೊಡಬೇಕು. ಸದನವನ್ನು ಮುಂದಕ್ಕೆ ಹಾಕಬೇಕು, ಜೊತೆಗೆ ಅನಾವರಣ ಮಾಡದೆ ಉಳಿದಿರತಕ್ಕಂಥ ಪ್ರತಿಮೆಯನ್ನು ಅನಾವರಣ ಮಾಡಬೇಕು. ಈ ಬಗ್ಗೆ ಸಭೆಗೆ ಸರ್ಕಾರದ ನಿಮ್ಮ ನಿಲುವು ಏನು ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : ಆಯಿತು ಬಿಡಿ. ಬಹಳ ಮುಂದಕ್ಕೆ ಹೊರಟು ಹೋಗಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಕಳಸಾ–ಬಂಡೂರಿ ಬಗ್ಗೆ ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ನಾನು ಸ್ಟೇಟ್‌ಮೆಂಟ್ ಮಾಡಿಸುತ್ತೇನೆ. ಆ ನಂತರ ಸಂದರ್ಭದಲ್ಲಿ ಯಾರಾದರೂ ಮಾತನಾಡುವವರು ಇದ್ದರೆ ಮಾತನಾಡಬಹುದು.

ಡಾ: ಆರ್.ಬಿ. ಶಿರಿಯಣ್ಣನವರ್ : ನಾವು ಆ ಭಾಗದಿಂದ ಬಂದಂಥ ಶಾಸಕರು. ನಾನು ಮಾತನಾಡಬೇಕೆಂದು ಯಾವಾಗಲೂ ಎದ್ದು ನಿಂತಿಲ್ಲ.

ಶ್ರೀ ಸಿ.ಸಿ. ಪಾಟೀಲ್ : ಎರಡು ನಿಮಿಷ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ನಿಮಗೆ ಎಷ್ಟು ಹೇಳಿದರೂ ಕೇಳುವುದಿಲ್ಲ.

ಡಾ: ಆರ್. ಬಿ. ಶಿರಿಯಣ್ಣನವರ್ : ನಾವು ಆ ಭಾಗದಿಂದ ಬಂದಿರುವ ಶಾಸಕರು ಇಬ್ಬರಲ್ಲಿ ಒಬ್ಬರು ಮಾತನಾಡುತ್ತೇವೆ.

ಶ್ರೀ ಸಿ. ಸಿ. ಪಾಟೀಲ್ : ಆ ಭಾಗದಿಂದ ಬಂದಿರುವಂಥ ಶಾಸಕರಿಗೆ ಅವಕಾಶವಿಲ್ಲವೆಂದರೆ ಏನರ್ಥ? ಕುಳಿತುಕೊಳ್ಳಿ ಎಂದರೆ ಕೂಡುತ್ತೇವೆ.

ಅಧ್ಯಕ್ಷರು : ಹೊರಗಡೆ ಕಳುಹಿಸಿ ಬಿಡುತ್ತೇನೆ ಅಷ್ಟೆ. ಆ ಪಕ್ಷದ ವಿಪ್ ನಾಯಕರು ಯಾರಿದ್ದಾರೆ ನೋಡಿ, ಈ ತರಹ ಆದರೆ ಆಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಂದೇ ಒಂದು ನಿಮಿಷ.

ಅಧ್ಯಕ್ಷರು : ಇರಬಹುದು. ಅವರು ಅರ್ಥವನ್ನು ಮಾಡಿಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿನಂತಿ ಏನೆಂದರೆ, ಕಳಸಾ-ಬಂಡೂರಿ ವಿಷಯ ಬಹಳ ಪ್ರಾಮುಖ್ಯ ವಾದಂಥದ್ದು.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆ, ಏನಾದರೂ ಇದ್ದರೆ ಆ ಸಂದರ್ಭದಲ್ಲಿ ಮಾತನಾಡಿ ಎಂದು ಹೇಳಿದ್ದೇನೆ. ಆದರೂ ಈ ತರಹ ಮಾಡಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಆ ಭಾಗವನ್ನು ಪ್ರತಿನಿಧಿಸುವಂಥವರು ಅಧ್ಯಕ್ಷರೇ

ಅಧ್ಯಕ್ಷರು : ಮಾನ್ಯ ಶಂಕರಮೂರ್ತಿಯವರೆ, ನಿಮ್ಮ ಬಿಲ್‌ನ್ನು ಪ್ರಸ್ತಾಪ ಮಾಡಿ. ನೋಡಿ ಹೆಗಡೆಯವರೆ, your people are very indisciplined. Most indisciplined. - - -

-

ಅರ್ಥವಾಗುವುದಿಲ್ಲವೇ? ನಾನು ಸಂಸ್ಕೃತದಲ್ಲಿ ಹೇಳುತ್ತಿದ್ದೇನೆ ಏನು? should they not understand? ಹೇಳಿ ಸ್ವಾಮಿ. ನನಗೆ ಬೇಜಾರಾಗಿ ಹೋಗಿದೆ. ವಾಟಾಳ್ ನಾಗರಾಜ್‌ರವರೆ, ನಾವು ಬಹಳ ಮುಂದೆ ಹೋಗಿದ್ದೇವೆಂದು ಹೇಳಿದ್ದೇನೆ. ತಾವು ಸಹಕರಿಸಿ.

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ವಾಟಾಳ್ ನಾಗರಾಜ್‌ರವರೆ, ಬಾಬು ಜಗಜೀವನ್‌ರಾಮ್‌ರವರ ಬಗ್ಗೆ ಹೇಳುತ್ತೇನೆ. ಭಾರತದ ಹಿಂದಿನ ಉಪ ಪ್ರಧಾನ ಮಂತ್ರಿಗಳು ಭಾರತದ ಗೌರವಾನ್ವಿತ ನಾಯಕರು ಆಗಿದ್ದಂಥ ಬಾಬು ಜಗಜೀವನ್‌ರಾಮ್‌ರವರ 99ನೇ ಜನ್ಮದಿನದ ಶುಭ ದಿನದಿಂದ ಇಂದು ಅವರನ್ನು ನೆನಪು ಮಾಡಿಕೊಳ್ಳುತ್ತಾ, ನಾನು ಒಂದು ಸಣ್ಣ ವಿಧೇಯಕವನ್ನು ಮಂಡಿಸುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಯಾವುದಕ್ಕೆ ಯಾವುದನ್ನೋ ಹೇಳುತ್ತಿದ್ದಾರೆ. ವಿಧೇಯಕ ಒಂದು ಕಡೆ ಬಾಬು ಜಗಜೀವನ್‌ರಾಮ್‌ರವರ ಬಗ್ಗೆ ಹೇಳುವುದಕ್ಕೆ ಸಂತೋಷವೆಂದು ಹೇಳಿ ಬೇರೆ ವಿಧೇಯಕವನ್ನು ಮಂಡಿಸುತ್ತಿದ್ದೀರಿ. ಇದರ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನು ಹೇಳಿ? ಮಾನ್ಯ ಯಡಿಯೂರಪ್ಪನವರು ಬಂದಿದ್ದಾರೆ, ಇವತ್ತು 99ನೇ

ಜನ್ಮದಿನಾಚರಣೆ, ನೀವು ರಜೆಯನ್ನು ಕೊಡುತ್ತೀರಾ? ಏತಕ್ಕಾಗಿ ಕೊಡಲಿಲ್ಲ, ಹೊರಗಡೆ ಅವರ ಪ್ರತಿಮೆ ಅನಾವರಣವಾಗಿಲ್ಲ. ಅದರ ಬಗ್ಗೆ ಸರ್ಕಾರದ ನಿಲುವು ಏನು?

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೆ, ದಯಮಾಡಿ ತಾವು ಸಹಕರಿಸಿ, ಏಕೆಂದರೆ, ಆವತ್ತು ಇದರ ಬಗ್ಗೆ ಬಿಎಸಿಯಲ್ಲಿ ಚರ್ಚೆಯಾಗಿದೆ. ನಿಮ್ಮನ್ನು ಬಿಟ್ಟರೆ ಉಳಿದವರೆಲ್ಲರೂ ಕಲಾಪ ನಡೆಯಲಿ ಎಂದು ತೀರ್ಮಾನವಾಯಿತು. ಅನಂತರ ತಾವು ಒಪ್ಪಿಕೊಂಡಿದ್ದು ಆಯಿತು. ಈಗ ಇಲ್ಲಿ ನಮಗೆ ಏನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್. ಆಂಜನೇಯ (ಭರಮಸಾಗರ) : ಮಾನ್ಯ ಅಧ್ಯಕ್ಷರೆ, ಸರ್ಕಾರಿ ವೆಚ್ಚದಲ್ಲಿ ರಾಜ್ಯಾದ್ಯಂತ ಬಾಬು ಜಗಜೀವನ್‌ರಾಂರವರ ಜನ್ಮದಿನೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಜಿಲ್ಲಾ ಮಂತ್ರಿಗಳು ಅಲ್ಲಿರಬೇಕಾಗಿತ್ತು. ಇವತ್ತು ರಜೆಯನ್ನು ನೀಡಬೇಕಾಗಿತ್ತು, ಅಟ್‌ಲಿಸ್ಟ್ ಸದನವನ್ನಾದರೂ ಕೂಡ ಮುಂದೂಡಬೇಕಾಗಿತ್ತು. ಇಲ್ಲಾ ಅಂದರೆ ಸಾರ್ವತ್ರಿಕ ರಜೆಯನ್ನಾದರೂ ಘೋಷಣೆ ಮಾಡಬೇಕಾಗಿತ್ತು. ಸಾರ್ವತ್ರಿಕವಾಗಿ ರಜೆಯನ್ನು ಘೋಷಣೆ ಮಾಡುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಸದನವನ್ನಾದರೂ ಮುಂದೂಡ ಬೇಕಾಗಿತ್ತು. ಸರ್ಕಾರಿ ವೆಚ್ಚದಲ್ಲಿ ಸಮಾರಂಭವನ್ನು ಮಾಡುತ್ತಿದ್ದಾರೆ. ಯಾವ ಒಬ್ಬ ಮಂತ್ರಿಯೂ ಆಚರಣೆಯ ಸಂದರ್ಭದಲ್ಲಿ ಇಲ್ಲದಿದ್ದರೆ ಎಷ್ಟು ಇದರಿಂದಾಗಿ ಅನಾಹುತವಾಗುತ್ತದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಮತ್ತು ಸಹಕರಿಸಿ. ನಿಮ್ಮ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ, ಸದನದ ಗಮನಕ್ಕೂ ಕೂಡ ತಂದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಹೊರಗಡೆ ಪ್ರತಿಮೆ ಅನಾವರಣ ಮಾಡಬೇಕಾಗಿತ್ತು, ಎರಡನೆಯದಾಗಿ 5 ಗಂಟೆಗೆ ಸಮಾರಂಭವನ್ನು ಇಟ್ಟುಕೊಂಡಿದ್ದೀರಿ, ಇಲ್ಲಿ ಸದನವನ್ನು ನಡೆಸುತ್ತಿದ್ದೀರಿ. 5 ಗಂಟೆಗೆ ಸಮಾರಂಭ ಇದೆ, ಅನೇಕ ಶಾಸಕರುಗಳು ಮತ್ತು ಮಂತ್ರಿಗಳು, ಆ ಕ್ಷೇತ್ರದ ಮಂತ್ರಿಗಳು ಮತ್ತು ಜಿಲ್ಲಾ ಮಂತ್ರಿಗಳು ಎಲ್ಲರೂ ಹೋಗಬೇಕಾಗುತ್ತದೆ. ಇಂತಹದ್ದರಲ್ಲಿ ನೀವು ಈ ಶುಭದಿನವನ್ನು ರಜಾದಿನವೆಂದು ಘೋಷಣೆ ಮಾಡಿದ್ದರೆ ಚೆನ್ನಾಗಿತ್ತು. ಇದರ ಬಗ್ಗೆ ಸರ್ಕಾರದ ನಿರ್ಧಾರವನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಡಾ. ಜಗಜೀವನ್‌ರಾಂರವರ ಜನ್ಮದಿನವನ್ನು ರಾಜ್ಯಾದ್ಯಂತ ಅದ್ದೂರಿಯಿಂದ ಆಚರಣೆ ಮಾಡುತ್ತಿದ್ದೇವೆ. 5 ಗಂಟೆಗೆ ಈ ನಾಡಿನ ಎಲ್ಲಾ ಪ್ರಮುಖರನ್ನು ಕರೆಸಿ ಮುಖ್ಯಮಂತ್ರಿಗಳು ಹಾಗೂ ನಾನು ಎಲ್ಲಾ ಪ್ರತಿಪಕ್ಷದ ನಾಯಕರನ್ನು ಎಲ್ಲರನ್ನೂ ಕರೆದು ವಿಶೇಷವಾದಂತಹ ಸಮಾರಂಭವನ್ನು ಮಾಡಿ ಅವರ ಜೀವನವನ್ನು ಸ್ಮರಣೆ ಮಾಡಿಕೊಂಡು ಅವರು ಏತಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟರು ಎಂಬುದರ ಬಗ್ಗೆ ನೆನಪು ಮಾಡಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ತಾವೇನು ಮಾನ್ಯ ವಾಟಾಳ್‌ನಾಗರಾಜ್‌ರವರು ಪ್ರತಿಮೆ ಅನಾವರಣವಾಗಬೇಕೆಂದು ಹೇಳಿದ್ದಾರೆ, ಪ್ರತಿಮೆ ಅನಾವರಣ ಆಗುವುದರ ಬಗ್ಗೆ ತಾವು ಸೂಕ್ತವಾದಂತಹ ಸಲಹೆಯನ್ನು ಕೊಟ್ಟಿದ್ದೀರಿ, ಆದಷ್ಟು ಬೇಗ ಸರ್ಕಾರ ಆ ಕಡೆಗೆ ಗಮನವನ್ನು ಕೊಡುತ್ತದೆ. ಅವರ ಸೆಂಟಿನರಿ ಸೆಲಬರೇಷನ್‌ನ್ನು ಬಹುಶಃ ಅದ್ಭುತವಾದಂತಹ ರೀತಿಯಲ್ಲಿ ನಿಮ್ಮೆಲ್ಲರ ಸಲಹೆಯನ್ನು ಪಡೆದುಕೊಂಡು ಬಹಳ ಒಳ್ಳೆಯ ರೀತಿಯಲ್ಲಿ ದೇಶಾದ್ಯಂತ ಮತ್ತು ರಾಜ್ಯಾದ್ಯಂತ ಆಚರಣೆಯನ್ನು ಮಾಡುತ್ತೇವೆ. ಇನ್ನೊಂದು ನಾನು ಶಾಸಕ ಮಿತ್ರರಲ್ಲಿ ವಿನಂತಿ ಮಾಡುವುದೇನೆಂದರೆ, ಇಂತಹ ದೊಡ್ಡವರ ಜನ್ಮದಿನಾಚರಣೆಯನ್ನು ಹಗಲುರಾತ್ರಿ ದುಡಿದು ಆ ಸಮೂಹ ಬೇಕಾದಂತಹ ಸವಲತ್ತುಗಳನ್ನು ಒದಗಿಸಿಕೊಟ್ಟು ಕೆಲಸ ಮಾಡುವುದರ ಮೂಲಕ ಶ್ರದ್ಧಾಂಜಲಿ ಅಥವಾ ಅವರ ಸ್ಮರಣೆಯನ್ನು ಮಾಡಿಕೊಳ್ಳುವಂತಹ ಕೆಲಸವಾಗಬೇಕೇ ಹೊರತು ಎಲ್ಲಾ ಸಂದರ್ಭದಲ್ಲಿಯೂ ರಜೆಯನ್ನು ಘೋಷಣೆ ಮಾಡಿ ಮಜಾ ಮಾಡುವುದಲ್ಲ. ರಜಾ ಎಂದು ಹೇಳಿದರೆ ತಾವು ಒಂದು ನಿಮಿಷ ಕೇಳಿ ಸಾರ್, ರಜೆ ಎನ್ನುವಂತಹ ಪರಿಕಲ್ಪನೆಯು ಅವರಿಗೆ ಗೌರವ ಕೊಡುವಂತಹ ಗೌರವ ಸೂಚಕ ಎಂದು ನಾನು ಭಾವಿಸುವುದಿಲ್ಲ. ನಾವು ಕಾರ್ಯಕ್ರಮವನ್ನು ಅದ್ದೂರಿಯಾಗಿ ಮಾಡುವ ಮೂಲಕ ಅವರು ಯಾವ ವಿಚಾರಧಾರೆಯನ್ನು ಈ ದೇಶದ ಜನರ ಮುಂದೆ ಇಟ್ಟರೋ, ಆ ತುಳಿತಕ್ಕೆ ಒಳಗಾದವರ ಜನರ ಬಗ್ಗೆ ಇಟ್ಟರೋ ಅದನ್ನು ಸಾಕಾರಗೊಳಿಸುವ ಬಗ್ಗೆ ಮುಡುಪಾಗಿಡೋಣ. ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಯಲ್ಲಿ ಇದರ ಬಗ್ಗೆ ಎಲ್ಲಾ ಪ್ರತಿಪಕ್ಷದ ನಾಯಕರೊಂದಿಗೆ ಚರ್ಚೆಯಾಯಿತು. ಎಲ್ಲರೂ ಒಕ್ಕೊರಲಿನಿಂದ ಇವತ್ತು ಸದನವನ್ನು ಮುಂದೂಡಬೇಕೆಂದು ಹೇಳಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಬಹುತೇಕ ಶಾಸಕರು ಸದನದ ಕಾರ್ಯಕಲಾಪಗಳು ನಡೆಯಬೇಕು, ಅವರ ಸ್ಮರಣೆಯೂ

ಕೂಡ ಆಗಬೇಕು. ಅವರ ಬಗ್ಗೆ ಚಿಂತನೆಯೂ ಕೂಡ ನಡೆಯಬೇಕು, ಇದರ ಬಗ್ಗೆ ಅಲ್ಲಿ ತೀರ್ಮಾನವಾಗಿರುವ ಬಗ್ಗೆ ನಾವು ಬದ್ದರಾಗಿದ್ದೇವೆಯೇ ಹೊರತು ವಾಟಾಳ್ ನಾಗರಾಜ್‌ರವರು ಅಲ್ಲಿ ಏನು ನಡೆಯಿತು ಎಂದು ಹೇಳದೆಯೇ ಅವರೊಬ್ಬರೇ ಎಕ್ಸ್‌ಪ್ರೆಸ್ ಮಾಡಿದರು. ಉಳಿದೆಲ್ಲರ ಒಟ್ಟಾರೆ ಅಭಿಪ್ರಾಯ ಇತ್ತು, ಕಾರ್ಯಕಲಾಪ ನಡೆಸಬೇಕು. ಸದನ ಮುಂದೂಡಿದರೆ ವಾಪಸ್ಸು ಶಾಸಕರು ಬರುವುದಕ್ಕೆ ಕಷ್ಟವಾಗುತ್ತದೆ. ಜೊತೆಜೊತೆಗೆ ಸಾಯಂಕಾಲ ನಂತರ ನಾವೆಲ್ಲರೂ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಅದಕ್ಕಾಗಿ 4 ಗಂಟೆ 4–30ಗಂಟೆಯ ಹೊತ್ತಿಗೆ ಇವತ್ತಿನ ಕಾರ್ಯಕಲಾಪವನ್ನು ಮುಗಿಸಬೇಕೆಂದು ನಾವೆಲ್ಲರೂ ತೀರ್ಮಾನ ಮಾಡಿದ್ದೇವೆ. 5ನೇ ತಾರೀಖಿನ ...

ಶ್ರೀ ವಾಟಾಳ್ ನಾಗರಾಜ್ : ತಾವು ರಜೆಯನ್ನು ಕೊಡಬೇಕಾಗಿತ್ತು, ಎಲ್ಲಾ ಕಡೆಗಳಿಗೆ ಹೋಗಬೇಕಾಗಿತ್ತು. ಇದು ಸರಿಯಲ್ಲ, ತಮಗೆ ವಂದನೆಯನ್ನು ಸಲ್ಲಿಸಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದುವರೆಗೂ ನಡೆದುಕೊಂಡಿರುವಂತಹ ಪದ್ದತಿಯನ್ನು ಮುಂದುವರಿಸಬೇಕೆನ್ನುವಂತಹ ಪ್ರಯತ್ನ ಮಾಡಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ರಜೆಯನ್ನು ಕೊಡಬೇಕಾಗಿಲ್ಲ, ವಾಟಾಳ್ ನಾಗರಾಜ್‌ರವರೇ ರಜೆಯನ್ನು ತೆಗೆದುಕೊಳ್ಳುತ್ತಾರೆ. ಅವರೇ ರಜೆಯನ್ನು ತೆಗೆದುಕೊಂಡು ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸುಮ್ಮನೆ ಈ ರೀತಿಯಾಗಿ ಪ್ರಚಾರ ತೆಗೆದುಕೊಳ್ಳುವುದು. ವಾಟಾಳ್ ನಾಗರಾಜ್ ಎಂದರೆ ವಾಕೌಟ್ ಎಂದು ಆಗಿಬಿಡುತ್ತದೆ. ಇದು ಪುಕಸಟ್ಟೆ ಪ್ರಚಾರ ತೆಗೆದುಕೊಳ್ಳುವುದಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ವಾಕೌಟ್ ಮಾಡಿಲ್ಲ ಸಾರ್ ರಜೆಯನ್ನು ಹಾಕಿ ಹೋಗುತ್ತಿದ್ದಾರೆ. ಅವರು ವಾಕೌಟ್ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ : ಅವರು ಚಾಮರಾಜನಗರದ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಬೇಕಾಗಿದೆ ಅವರು ಹೋಗಲೇಬೇಕಾಗಿದೆ, ಅದಕ್ಕಾಗಿ ಈ ರೀತಿ ಮಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಶಂಕರಮೂರ್ತಿಯವರೆ, ತಾವು ಎಕ್ಸ್‌ಪ್ಲೇನ್ ಮಾಡಿ.

ಶ್ರೀ ಎಂ.ಕೆ. ಸೋಮಶೇಖರ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯಾಗಲಿ, ಉಪಮುಖ್ಯಮಂತ್ರಿಗಳಾಗಲಿ ಮೈಸೂರಿನ ಕಲಾಮಂದಿರದಲ್ಲಿ ಬಾಬು ಜಗಜೀವನ್‌ರಾಂರವರ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲವೆಂದು ಎಲ್ಲರೂ ಸೇರಿ ಸಮಾರಂಭವನ್ನು ಬಹಿಷ್ಕರಿಸಿದ್ದರು. ಅವರೆಲ್ಲರೂ ಸೇರಿ ಗಲಾಟೆಯನ್ನು ಮಾಡಿ ಸರ್ಕಾರದ ವತಿಯಿಂದ ಯಾರೂ ಬಂದಿಲ್ಲವೆಂದು ಮಾಡಿದರು. ಇಂತಹ ದಿನ ಸದನವನ್ನು ಮುಂದೂಡಬೇಕಾಗಿತ್ತು. ಎಲ್ಲರೂ ಕೂಡ ಶಾಸಕರು ಮತ್ತು ಮಂತ್ರಿಗಳು ಅವರವರ ಕ್ಷೇತ್ರದಲ್ಲಿ ಬಾಬು ಜಗಜೀವನ್‌ರಾಂರವರ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿತ್ತು. ಇವತ್ತು ಕ್ಷೇತ್ರದಲ್ಲಿ ಜನರು ಏನೆಂದು ಹೇಳುತ್ತಾರೆ, ನೋಡಿ ಈ ಕಾರ್ಯಕ್ರಮಕ್ಕೆ ಬರುವುದಿಲ್ಲ, ಬೇರೆ ಕಾರ್ಯಕ್ರಮಗಳೆಂದರೆ ಭಾಗವಹಿಸುತ್ತಾರೆ, ಹತ್ತಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ, ಬಾಬುಜಗಜೀವನ್‌ರಾಂರವರ ಕಾರ್ಯಕ್ರಮಕ್ಕೆ ಶಾಸಕರು ಮತ್ತು ಮಂತ್ರಿಗಳು ಭಾಗವಹಿಸುತ್ತಿಲ್ಲ ಅಲ್ಲಿ ಕ್ಷೇತ್ರದಲ್ಲಿ ಜನರು ವಿರೋಧ ಮಾಡುತ್ತಾರೆ. ಕಳೆದ ವರ್ಷ ಕಲಾಮಂದಿರದಲ್ಲಿ ದೊಡ್ಡ ಗಲಾಟೆಯಾಗಿದೆ. ದಯಮಾಡಿ ಇಂತಹ ದಿನವಾದರೂ ಕೂಡ ಸದನವನ್ನು ಮುಂದೂಡಿ ನಾವೆಲ್ಲರೂ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ ಅವಕಾಶವನ್ನು ಮಾಡಿಕೊಡಬೇಕಾಗಿತ್ತು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮುಂಬರುವ ದಿವಸಗಳಲ್ಲಿ ನಿಮ್ಮೆಲ್ಲರ ಸಲಹೆಯನ್ನು ಪಡೆದು ಸೂಕ್ತವಾದಂತಹ ತೀರ್ಮಾನವನ್ನು ತೆಗೆದುಕೊಳ್ಳೋಣ. ಬಿಎಸಿಯಲ್ಲಿ ಏನು ತೀರ್ಮಾನವಾಯಿತೋ ಅದರ ಪ್ರಕಾರ ಕಾರ್ಯಕಲಾಪ ನಡೆಯುತ್ತದೆ. ಮುಂದೆ ನೀವು ಕೊಟ್ಟಂತಹ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರವು ಸೂಕ್ತವಾದಂತಹ ತೀರ್ಮಾನವನ್ನು ಮುಂದಿನ ವರ್ಷದಲ್ಲಿ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಶಂಕರ್‌ಮೂರ್ತಿಯವರೇ, ತಾವು ಎಕ್ಸ್‌ಪ್ಲೇನ್ ಮಾಡಿ.